ರಾಜ್ಯದಲ್ಲಿ ''ಟ್ರಕ್ ಟರ್ಮಿನಲ್'' ನಿರ್ಮಾಣ.

2453(3184)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಸಾರಿಗೆ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಟ್ರಕ್ ಟರ್ಮಿನಲ್ ನಿರ್ಮಾಣ ಮಾಡಬೇಕಾದ ಅವಶ್ಯಕತೆಯು ಸರಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಪ್ರಸ್ತುತ ಟ್ರಕ್ ಟರ್ಮಿನಲ್‌ನ ನಿರ್ಮಾಣವನ್ನೇನಾದರೂ ಕೈಗೊಂಡಿದೆಯೆ?

ಇ) ಹಾಗಿದ್ದಲ್ಲಿ ಈ ಬಗೆಗಿನ ವಿವರಗಳೇನು?

ಈ) ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸರಕು ಸಾಗಾಣಿಕೆ ವಾಹನಗಳಿಗೆ ನಿಲ್ದಾಣದ ಅನುಕೂಲತೆ ಮಾಡಲಾಗಿದೆಯೆ?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ಹೌದು.

ಆ) ಯಶವಂತಪುರದ ಕೈಗಾರಿಕಾ ಉಪನಗರ 2ನೇ ಹಂತದಲ್ಲಿ 43-00 ಎಕರೆ ಭೂಮಿಯಲ್ಲಿ ಮೂಲ ಸೌಲಭ್ಯಗಳನ್ನೊಳಗೊಂಡ ಒಂದು ಟ್ರಕ್ ಟರ್ಮಿನಲ್‌ನ್ನು ನಿರ್ಮಿಸಲಾಗಿದೆ.

ಇ) ಮೇಲ್ಕಂಡ ಟ್ರಕ್ ಟರ್ಮಿನಲ್ ಅಲ್ಲದೆ ಬೆಂಗಳೂರು-ಹೊಸೂರು, ಬೆಂಗಳೂರು-ಹಳೇ ಮದ್ರಾಸ್, ಬೆಂಗಳೂರು-ಬಳ್ಳಾರಿ ಮತ್ತು ಬೆಂಗಳೂರು-ಪೂನಾ ರಸ್ತೆಗಳಲ್ಲಿ ಟ್ರಕ್ ಟರ್ಮಿನಲ್‌ಗಳನ್ನು ನಿರ್ಮಿಸಲು ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿ. ಕಂಪನಿಯು ಯೋಜನೆಯನ್ನು ಹಾಕಿಕೊಂಡಿದೆ.

ಈ) ಇಲ್ಲ. ಇತರ ನಗರದಲ್ಲಿ ಟ್ರಕ್ ಟರ್ಮಿನಲ್‌ಗಳನ್ನು ನಿರ್ಮಿಸಿ ಸರಕು ಸಾಗಾಣಿಕೆ ವಾಹನಗಳಿಗೆ ನಿಲ್ದಾಣದ ಅನುಕೂಲತೆ ಮಾಡಿಕೊಡುವ ಗುರಿಯನ್ನು ಹೊಂದಿದೆ.

ಕ್ರೀಡಾ ಗ್ರಾಮ ಮತ್ತು ಮಳೆ ನೀರಿನ ಚರಂಡಿಯ ತಡಗೋಡೆಯ ಕಾಮಗಾರಿಯಲ್ಲಿ ಕಳಪೆ ಗುಣಮಟ್ಟ.

2456(2019)

ಶ್ರೀ ಆಶೋಕ .ಆರ್(ಉತ್ತರಹಳ್ಳಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಷ್ಟ್ರೀಯ ಕ್ರೀಡಾ ಗ್ರಾಮ ಮತ್ತು ಮಳೆ ನೀರಿನ ಚರಂಡಿಯ ತಡೆಗೋಡೆ ನಿರ್ಮಾಣಕ್ಕಾಗಿ ಕರ್ನಾಟಕ ಗೃಹ ಮಂಡಳಿಯು ಮೆ:ನಾಗಾರ್ಜುನ ಕನ್‌ಸ್ಟ್ರಕ್ಷನ್‌ಗೆ ಪಾವತಿ ಮಾಡಬೇಕಾಗಿರುವ ಬಾಕಿ ಮೊತ್ತವೆಷ್ಟು? (ಪ್ರತ್ಯೇಕ ವಿವರ ನೀಡುವುದು)

ಆ. ಕಾಮಗಾರಿಯ ಗುಣಮಟ್ಟ ಕಳಪೆಯಾದ್ದರಿಂದ ಹಣ ಪಾವತಿಸುವುದನ್ನು ನಿಲ್ಲಿಸಲಾಗಿದೆಯೆ?

ಇ. ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ. ಮೆಸರ್ಸ್ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ಬಾಕಿ ನೀಡಬೇಕಾಗಿರುವ ಮೊತ್ತ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿವರ	ಕಾಮಗಾರಿಗಳು ಮುಗಿದು ಬಾಕಿ ನೀಡಬೇಕಾಗಿರುವ ಮೊತ್ತ	ಕಾಮಗಾರಿಗಳು ಪ್ರಗತಿಯಲ್ಲಿದ್ದು ಮುಗಿದನಂತರ ನೀಡಬೇಕಾಗಿರುವ ಮೊತ್ತ
1.	ಕಟ್ಟಡಗಳ ನಿರ್ಮಾಣ	8.86 ಲಕ್ಷಗಳು	
	ಸೆಕ್ಟರ್ - ಸಿ 1	4.00 ಲಕ್ಷಗಳು	
	ಸೆಕ್ಟರ್ ಸಿ 2		67.69 ಲಕ್ಷಗಳು
			52.72 ''
	ಎಕ್ಸ್‌ಟ್ರಾ ಐಟಂ		5.29 ''
2.	ಆರ್.ಸಿ.ಸಿ. ಕವರ್ ಸ್ಲಾಬ್		204.00 ''

3.	ಎಕ್ಸ್‌ಟ್ರನಲ್ ಡೆವಲಪ್‌ಮೆಂಟಲ್ ಕಾಮಗಾರಿ		10.00 ''
4.	ಆರ್.ಸಿ.ಸಿ. ರಿಟೈನಿಂಗ್‌ವಾಲ್	17.00 ಲಕ್ಷಗಳು	
5.	ಮೀಡಿಯನ್ ರಸ್ತೆ	10.60 ''	-
		40.46 ಲಕ್ಷಗಳು	343.70 ಲಕ್ಷಗಳು

ಆ. ಕಾಮಗಾರಿಯ ಗುಣಮಟ್ಟ ಕಳಪೆಯಾಗಿರುವುದಿಲ್ಲ. ಆದ್ದರಿಂದ ಹಣ ಪಾವತಿಸುವುದನ್ನು ನಿಲ್ಲಿಸಲಾಗಿಲ್ಲ.

ಇ. ಗುತ್ತಿಗೆದಾರರು ಫಿನಿಷಿಂಗ್ ಕಾಮಗಾರಿ ಹಾಗೂ ಸರಿಪಡಿಸುವ ಕಾಮಗಾರಿಗಳನ್ನು ಮಾಡುತ್ತಾ ಇರುತ್ತಾರೆ. ಆದಕಾರಣ ಹಣವನ್ನು ಫಿನಿಷಿಂಗ್ ಕಾಮಗಾರಿಯನ್ನು ಮುಗಿಸಿದ ನಂತರ ಪಾವತಿ ಮಾಡಲಾಗುತ್ತಿವೆ.

ದೊಡ್ಡ ಬೆಲೆ ಗ್ರಾಮದ ಸರ್ಕಾರಿ ಜಾಗದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ.

2458(3189)

ಶ್ರೀ ಆರ್.ಅಶೋಕ್(ಉತ್ತರಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ದೊಡ್ಡಬೆಲೆ ಗ್ರಾಮದಲ್ಲಿರುವ ಸರ್ವೆ ನಂ:7:5 ನಲ್ಲಿರುವ ಅಂದಾಜು 24 ಎಕರೆ ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ಗುಡಿಸಲುಗಳು ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಲ್ಲದೆ ಈ ಜಾಗವನ್ನು ಖಾಸಗಿ ವ್ಯಕ್ತಿಗಳು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅನಧಿಕೃತ ಗುಡಿಸಲುಗಳನ್ನು ತೆರವು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?